ಮಾನವ ದ್ವೇಷಗಳಿಗೆ ಸಾಹಿತ್ಯದಲ್ಲಿ ಪರಿಹಾರ

ಜಿಲ್ಲಾ ೮ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಜಿ.ಜಿ.ಮಂಜುನಾಥನ್ ಅಭಿಮತ

ರಾಜಶೇಖರಕೋಟಿ ವೇದಿಕೆ,(ಗುಂಡ್ಲುಪೇಟೆ) ಜ.೧೨– 'ಕನ್ನಡ ಸಾಹಿತ್ಯ ಚರಿತ್ರೆ ಧರ್ಮದ ನೆಲೆಗಟ್ಟಿನ ಮೇಲೆ ನಿಂತಿದ್ದು, ಜೈನ, ವೈಷ್ಣವ, ವೀರಶೈವ ಧರ್ಮಗಳ ಕೃತಿಗಳನ್ನು ಸಂಪಾದಿಸುವಾಗ ನಾನು ಆಯಾ ಧರ್ಮೀಯನೇ ಆಗಿರುತ್ತಿದ್ದೆ'

ಚಾಮರಾಜನಗರ ಜಿಲ್ಲಾ ೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಕನ್ನಡ ವಿದ್ವಾಂಸ, ಸಂಶೋಧಕ ಜಿ.ಜಿ.ಮಂಜುನಾಥನ್ ಅವರ ನುಡಿ ಇದು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಗುರುಭವನದಲ್ಲಿ ಆಯೋಜಿಸಿರುವ ಸಮ್ಮೇಳನದಲ್ಲಿ ಕಿಕ್ಕಿರಿದು ತುಂಬಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾನವ ಜನ್ಮದ ಕ್ಲೇಶ, ಕಷ್ಟ ಹಾಗೂ ದ್ವೇಷಗಳಿಗೆ ಸಂತ ಸಾಹಿತ್ಯದಲ್ಲಿ ಪರಿಹಾರ ಇದೆ ಎಂದು ಕವಿಗಳಾದ ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಅವರ ಹೆಸರನ್ನು ಪ್ರಸ್ತಾಪಿಸಿದರು.

ತವರು ಜಿಲ್ಲೆ ಚಾಮರಾಜನಗರದಲ್ಲಿ ಮಹಿಳಾ ಸಾಹಿತ್ಯಕ್ಕೆ ಓನಾಮ ಹಾಕಿದವರು ಸಂಚಿ ಹೊನ್ನಮ್ಮ. ಆಕೆ ಹದಿಬದೆಯ ಧರ್ಮದ ಕೌಟುಂಬಿಕ ಜೀವನದಲ್ಲಿ ಹೆಣ್ಣಿನ ಪಾತ್ರ ಏನು ಎಂಬುದನ್ನು ರಾಮಾಯಣ ಮತ್ತು ಮಹಾಭಾರತ ಅಧ್ಯಯನದಲ್ಲಿ ಕಂಡುಕೊಂಡು ನಿರೂಪಿಸಿ ಸರಸ ಸಾಹಿತ್ಯದ ವರದೇವತೆಯಾಗಿದ್ದಾರೆ ಎಂದರು.

ಪೆಣ್ಣಲ್ಲವೆ ತಮ್ಮನ್ನೆಲ್ಲಾ ಹಡೆದ ತಾಯಿ, ಪೆಣ್ಣಲ್ಲವೆ ಪೊರೆದವಳು.. ಎಂದು ಪುರುಷ ಪ್ರಧಾನ ಸಮಾಜಕ್ಕೆ ಸಂಚಿ ಹೊನ್ನಮ್ಮ ಹಾಕಿದ ಸವಾಲನ್ನು ಉಚ್ಚರಿಸಿದರು. ಜಿಲ್ಲೆಯ ಈಗಿನ ಕೆಲ ಮಹಿಳಾ ಸಾಹಿತಿಗಳನ್ನು ಪಟ್ಟಿ ಮಾಡುತ್ತಾ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಹೆಸರನ್ನು ಪ್ರಸ್ತಾಪಿಸಿದರು. ಗೀತಾ ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಸಮರ್ಥವಾಗಿ ಬರೆಯಬಲ್ಲರೆಂದು ಗುಣಗಾನ ಮಾಡಿದರು.

೭೬ರ ಇಳಿ ವಯಸ್ಸಿನವರಾದ ಮಂಜುನಾಥನ್ ಅವರು ಬಾಲ್ಯದಿಂದ ಇಲ್ಲಿಯತನಕ ಬೆಳೆದುಬಂದ ಹಾದಿ, ಕನ್ನಡ ನಿಘಂಟು ಕಚೇರಿಯಲ್ಲಿನ ಸೇವೆ, ಜನ್ಮಸ್ಥಳವಾದ ಗುಂಡ್ಲುಪೇಟೆ ಕುರಿತು ಹೊರತಂದಿರುವ ೪ ಕೃತಿಗಳನ್ನು ಕುರಿತು ಮಾತಿನ ಮಧ್ಯೆ ತಿಳಿಸಿದರು. ಮಹಾಭಾರತದಲ್ಲಿ ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ಎನ್ನುವ ಮಾತಿಗನುಗುಣವಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕೆರೆಗಳನ್ನು ಕಟ್ಟಿಸಿ ಲೋಕೋಪಕಾರ ಮಾಡಿದ ಉಲ್ಲೇಖಗಳು ಶಾಸನಗಳಲ್ಲಿ ಕಂಡುಬರುತ್ತವೆ. ಅಂತೆಯೇ ಜಿಲ್ಲೆಯ ಜನಪ್ರತಿನಿಧಿಗಳು ಈ ಭಾಗದ ಕೆರೆಗಳಿಗೆ ನೀರು ತಂದಿರುವುದನ್ನು, ನದಿಮೂಲದಿಂದ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಪೂರೈಸಿರುವುದನ್ನು ನಾವು ಕಾಣಬಹುದಾಗಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಸಿ.ನಾಗಣ್ಣ ಸಮ್ಮೇಳನವನ್ನು ಉದ್ಘಾಟಿಸಿದರು. ಸಂಸದ ಆರ್.ಧ್ರುವನಾರಾಯಣ ಅವರು ಮುದ್ದುಮಾದಪ್ಪ ದತ್ತಿ ಪ್ರಶಸ್ತಿಯನ್ನು ಸಾಹಿತಿ ಹರವೆ ಶೀಲಾ ಸತ್ಯೇಂದ್ರಸ್ವಾಮಿ ಅವರಿಗೆ ಪ್ರದಾನ ಮಾಡಿದರು. ಸಾಹಿತಿ ಮಂಗಳ ಮುದ್ದುಮಾದಪ್ಪ, ಶಾರದಾ ಜಿ.ಜಿ.ಮಂಜುನಾಥನ್, ಕಸಾಪ ಜಿಲ್ಲಾಧ್ಯಕ್ಷ ಬಿ.ಎಸ್.ವಿನಯ್, ತಾಲ್ಲೂಕು ಅಧ್ಯಕ್ಷ ಚಿದಾನಂದಸ್ವಾಮಿ, ಕಾಡಾ ಅಧ್ಯಕ್ಷ ಎಚ್.ಎಸ್.ನಂಜಪ್ಪ, ತಾಪಂ ಅಧ್ಯಕ್ಷ ಎಚ್.ಎಸ್.ನಟೇಶ್, ಪುರಸಭೆ ಅಧ್ಯಕ್ಷ ಗಿರೀಶ್, ಜಿಪಂ ಉಪಾಧ್ಯಕ್ಷ ಯೋಗೇಶ್, ಸದಸ್ಯರಾದ ಮಹೇಶ್, ಚನ್ನಪ್ಪ, ಬೊಮ್ಮಯ್ಯ, ಎಪಿಎಂಸಿ ಅಧ್ಯಕ್ಷ ಬಿ.ಕೆ.ಶಿವಪ್ಪ, ಕಸಾಪ ಮಾಜಿ ಅಧ್ಯಕ್ಷರಾದ ಸೋಮಶೇಖರ ಬಿಸಲ್ವಾಡಿ, ಎಂ.ಎಂ.ನಾಗಮಲ್ಲಪ್ಪ, ಬರಗಿ ಶ್ರೀಕಂಠಪ್ಪ ರೈತ ಮುಖಂಡ ಆಲೂರು ಎ.ಎಂ.ಮಹೇಶ್ ಪ್ರಭು, ಎಚ್.ಎನ್.ಬಸವರಾಜು, ಪಿ.ಬಿ.ರಾಜಶೇಖರ್ ಮತ್ತಿತರರು ಹಾಜರಿದ್ದರು.

ಗುಂಡ್ಲುಪೇಟೆಯಲ್ಲಿ ಶುಕ್ರವಾರ ಪ್ರಾರಂಭವಾದ ಚಾ.ನಗರ ಜಿಲ್ಲಾ ೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಜಿ.ಜಿ.ಮಂಜುನಾಥನ್ ದೀಪಬೆಳಗಿದರು. ಸಚಿವರಾದ ಡಾ.ಗೀತಾ ಮಹದೇವಪ್ರಸಾದ್, ಆರ್.ಧ್ರುವನಾರಾಯಣ, ಮಂಗಳ ಮುದ್ದುಮಾದಪ್ಪ, ಶಾರದಾ ಮಂಜುನಾಥನ್ ಪ್ರೊ.ಸಿ.ನಾಗಣ್ಣ ಇತರರು ಚಿತ್ರದಲ್ಲಿದ್ದಾರೆ.

ಮಹದೇವಪ್ರಸಾದ್ ಸ್ಮರಣೆ

ದಿವಂಗತ ಎಚ್.ಎಸ್.ಮಹದೇವಪ್ರಸಾದ್ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ ರಾಜ್ಯದಾದ್ಯಂತ ನಡೆಯುವ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ತಲಾ ೫ಲಕ್ಷ ರೂ. ಅನುದಾನ ನೀಡುವ ವ್ಯವಸ್ಥೆ ಜಾರಿ ಮಾಡಿದರು. ಮನೆ ಯೊಂದರ ಮುಂದೆ 'ನಾಇ ಇದೆ' ಎಂದು ಬರೆಯುವ ಮಟ್ಟಿಗೆ ಕನ್ನಡ ಕೆಟ್ಟು ಹೋಗಿದೆ. ಕೇರಳ, ತಮಿಳುನಾಡಿನಲ್ಲಿರುವ ಭಾಷಾ ಪ್ರೇಮ, ಸಂಸ್ಕೃತಿ ನಮ್ಮಲ್ಲಿ ಇಲ್ಲ.

-ಪ್ರೊ.ಮಲೆಯೂರು ಗುರುಸ್ವಾಮಿ, ಸಾಹಿತಿ.

ಜಿಲ್ಲೆಯಲ್ಲಿ ಮೌಢ್ಯ ಹೆಚ್ಚು, ಅನಕ್ಷರತೆ ಕಡಿಮೆ

ಜಿಲ್ಲೆಯಲ್ಲಿ ಮೌಢ್ಯ ಹೆಚ್ಚಿದೆ. ಅನಕ್ಷರತೆ ಶೇ.೬೧ರಷ್ಟಿದೆ. ಸಾಹಿತಿಗಳು, ಕವಿಗಳು ಮೌಢ್ಯದ ವಿರುದ್ಧ ಧ್ವನಿ ಎತ್ತುತ್ತಿದ್ದಾರೆಯಾದರೂ ಇನ್ನಷ್ಟು ಜಾಗೃತಿ ಮೂಡಿಸಬೇಕು. ನಮ್ಮದು ಮುಂದುವರಿದ ಜಿಲ್ಲೆ ಆಗಬೇಕಾದರೆ ಸಾಕ್ಷರತೆ ಪ್ರಮಾಣ ಹೆಚ್ಚಬೇಕು. ಪ್ರಾಥಮಿಕ ಹಂತದಲ್ಲಿ ಶೇ.೧೦೦ರಷ್ಟು ಪ್ರವೇಶವಿರುತ್ತದೆ. ಪ್ರೌಢಶಾಲಾ ಹಂತಕ್ಕೆ ಹೋಗುವ ವೇಳೆಗೆ ಶೇ.೫೪ಕ್ಕೆ ಇಳಿಯುತ್ತಿದೆ. ಉನ್ನತ ಶಿಕ್ಷಣದ ಹೊತ್ತಿಗೆ ತೀವ್ರ ಇಳಿಮುಖ ಆಗುತ್ತಿದೆ. ಇದು ಆತಂಕಕಾರಿ ಬೆಳವಣಿಗೆ.

-ಆರ್.ಧ್ರುವನಾರಾಯಣ, ಸಂಸದರು.

ಜನಪದದಿಂದ ಕನ್ನಡ ಸಾಹಿತ್ಯ ಶ್ರೀಮಂತ

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದು, ಜನಪದ ಸಾಹಿತ್ಯ ಸಾಮಾಜಿಕ ಬದಲಾವಣೆಯ ಪ್ರೇರಕ ಶಕ್ತಿಯೂ ಹೌದು. ಸಾಹಿತ್ಯಕ್ಕೆ ಸಾಮಾಜಿಕ ಜವಾಬ್ದಾರಿ ಇರಬೇಕು. ಜವಾಬ್ದಾರಿ ಇಲ್ಲದ ಸಾಹಿತ್ಯ ಶ್ರೇಷ್ಠವಲ್ಲ ಎಂಬ ವಾದ ಸರಿಯಲ್ಲ. ಯಾವುದೇ ಭಾಷೆಯ ಸಾಹಿತ್ಯ ಜೀವಂತವಾಗಿದ್ದಲ್ಲಿ ಅದು ನಿಂತ ನೀರಾಗುವುದಿಲ್ಲ. ಹರಿಯುವ ನೀರಿನಂತೆ ಸಮೃದ್ಧವಾಗಿರುತ್ತದೆ.

-ಡಾ.ಗೀತಾ ಮಹದೇವಪ್ರಸಾದ್

ನಾಡಪ್ರೇಮ ರಾಜ್ಯವನ್ನು ಉಳಿಸುತ್ತದೆ

ನಾಡಪ್ರೇಮ ಎಂಬುದು ರಾಜ್ಯವನ್ನು ಉಳಿಸುತ್ತದೆ, ಬೆಳೆಸುತ್ತದೆ, ಬೆಳಗುತ್ತದೆ. ನಮ್ಮ ಗುಣವುಳ್ಳ ಕನ್ನಡ ಅನ್ನದ ಭಾಷೆಯಾಗಿ ಪರಿವರ್ತನೆಯಾಗಬೇಕಾದದ್ದು ಅಗತ್ಯ. ಗ್ರಾಮಾಂತರ ಪ್ರದೇಶದ ಮಕ್ಕಳಲ್ಲಿ ಅಗಾಧ ಪ್ರತಿಭೆ ಇದ್ದು, ಹೊಸ ಮಾಧ್ಯಮಗಳಿಂದ ಅವರು ದಿಕ್ಕೆಡದಂತೆ ಎಚ್ಚರವಹಿಸಬೇಕು.

-ಪ್ರೊ.ಸಿ.ನಾಗಣ್ಣ, ಸಾಹಿತಿ.

ಪ್ರಶಸ್ತಿ ಕೋಟಿ ಅವರಿಗೆ ಅರ್ಪಿಸಿ ಭಾವುಕರಾದರು

ಗುಂಡ್ಲುಪೇಟೆ: ಮಂಗಳ ಮುದ್ದುಮಾದಪ್ಪ ದತ್ತಿ ಪ್ರಶಸ್ತಿ ಸ್ವೀಕರಿಸಿ ಸಾಹಿತಿ ಹರವೆ ಶೀಲಾಸತ್ಯೇಂದ್ರಸ್ವಾಮಿ ಮಾತನಾಡಿ, ಬರಹಗಾರರಿಗೆ ಉತ್ತೇಜನ, ಪ್ರೋತ್ಸಾಹ ನೀಡಲು ಇಂತಹ ಪ್ರಶಸ್ತಿಗಳ ಅಗತ್ಯವಿದ್ದು, ಈ ಪ್ರಶಸ್ತಿಯನ್ನು ತಮ್ಮ ಬರವಣಿಗೆಗೆ ವೇದಿಕೆ ಕಲ್ಪಿಸಿಕೊಟ್ಟ 'ಆಂದೋಲನ' ದಿನಪತ್ರಿಕೆ ಸಂಸ್ಥಾಪಕ ಸಂಪಾದಕರಾದ ರಾಜಶೇಖರ ಕೋಟಿ ಅವರಿಗೆ ಅಭಿಮಾನಪೂರ್ವಕವಾಗಿ ಅರ್ಪಿಸುವುದಾಗಿ ತಿಳಿಸಿ ಅವರನ್ನು ನೆನೆದು ಭಾವುಕರಾದರು.

ಮೂರನೆಯ ಪುಟದಿಂದ

ಇಂದಿರಾ ಕ್ಯಾಂಟೀನ್

ಮೊದಲ ದಿನದ ತಿಂಡಿಯ ರುಚಿ ನೋಡಲು ನೂರಾರು ಜನರು ಆಗಮಿಸಿದ್ದರು.

ತಿಂಡಿ ಸೇವಿಸಿದವರೆಲ್ಲರೂ ಶುಚಿ-ರುಚಿ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತಪಡಿಸಿದರು. ಅತ್ಯಂತ ಕಡಿಮೆ ಬೆಲೆಗೆ ಉಪಾಹಾರ, ಊಟ ದೊರಕುವಂತೆ ಮಾಡಿದ್ದಕ್ಕೆ ಶ್ರಮಿಕವರ್ಗದ ಕೆಲವರು ಸರ್ಕಾರಕ್ಕೆ ಕೃತಜ್ಞತೆ ಅರ್ಪಿಸಿದರು.

ಸುಸಜ್ಜಿತ ಕ್ಯಾಂಟೀನ್: ಕಾಡಾ ಕಚೇರಿ ಆವರಣದಲ್ಲಿರುವ ಇಂದಿರಾ ಕ್ಯಾಂಟೀನ್ ಸುಸಜ್ಜಿತವಾಗಿದೆ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಿಂದ ಅರಮನೆಗೆ ತೆರಳುವ ರಸ್ತೆಯಲ್ಲಿ ಕಾಡಾ ಕಚೇರಿ ಕಾಂಪೌಂಡ್‌ನ ಅಲ್ಪಭಾಗ ಒಡೆದು, ಕ್ಯಾಂಟೀನ್ ಪ್ರವೇಶಕ್ಕೆ ಗೇಟ್ ಅಳವಡಿಸಲಾಗಿದೆ. ಒಳಭಾಗದಲ್ಲಿ ಗ್ರಾಹಕರು ನಿಂತು ಊಟ, ತಿಂಡಿ ಮಾಡಲು ಅವಕಾಶವಾಗುವಂತೆ ಮಾರ್ಬಲ್ ಕಲ್ಲುಗಳನ್ನು ಟೇಬಲ್‌ಗಳಂತೆ ಜೋಡಿಸಲಾಗಿದೆ. ಹೊರಗೂ ವೃತ್ತಾಕಾರದಲ್ಲಿ ಮಾರ್ಬಲ್ ಕಲ್ಲುಗಳನ್ನು ಅಳವಡಿಸಿದ್ದು, ಅಲ್ಲಿಯೂ ಜನರು ಊಟ ಮಾಡಲು ಅವಕಾಶವಿದೆ. ಸ್ವಸಹಾಯ ವ್ಯವಸ್ಥೆಯ ಇಲ್ಲಿ ನಿತ್ಯ ೫೦೦ ಮಂದಿಗೆ ಊಟದ ವ್ಯವಸ್ಥೆ ಇರುತ್ತದೆ.

ವಾರದ ಏಳೂ ದಿನ ಬೆಳಿಗ್ಗೆ ೭ರಿಂದ ರಾತ್ರಿ ೯ರವರೆಗೆ ಅಥವಾ ರಾತ್ರಿ ಊಟ ಮುಗಿಯುವವರೆಗೆ (ಎರಡರಲ್ಲಿ ಯಾವುದು ಮೊದಲೋ ಅದರಂತೆ) ಕ್ಯಾಂಟೀನ್ ಕಾರ್ಯನಿರ್ವಹಿಸಲಿದೆ. ತಿಂಡಿಗೆ ೫ ರೂ., ಊಟಕ್ಕೆ ೧೦ ರೂ. ದರ ನಿಗದಿಪಡಿಸಲಾಗಿದೆ.

ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿದೆ. ತಣ್ಣಗಿನ ನೀರು ಪಡೆಯುವುದಕ್ಕೂ ಅವಕಾಶವಿದೆ. ಪುರುಷ, ಮಹಿಳೆಗೆ ಪ್ರತ್ಯೇಕ ಶೌಚಾಲಯವಿದೆ. ಕ್ಯಾಂಟೀನ್ ಸುತ್ತ ಕಬ್ಬಿಣದ ಗ್ರಿಲ್ ಅಳವಡಿಸಲಾಗಿದೆ. ಉದ್ಘಾಟನೆ ಕಾರ್ಯಕ್ರಮ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಿಗ್ಗೆ ಉಚಿತವಾಗಿ ಉಪಾಹಾರ ವಿತರಿಸಲಾಯಿತು.

ಮೈಸೂರಿನ ಮೊದಲ ಇಂದಿರಾ ಕ್ಯಾಂಟೀನ್ ಉದ್ಘಾಟನೆ ವೇಳೆ ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು, ಮಹಾಪೌರ ಎಂ.ಜೆ.ರವಿಕುಮಾರ್, ಉಪ ಮಹಾಪೌರರಾದ ರತ್ನಾ ಲಕ್ಷ್ಮಣ, ಪಾಲಿಕೆ ಆಯುಕ್ತ ಜಿ.ಜಗದೀಶ್, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷೆ ಮಲ್ಲಿಗೆ ವೀರೇಶ್, ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಸಂಸ್ಥೆ ಅಧ್ಯಕ್ಷ ಎಚ್.ಎ.ವೆಂಕಟೇಶ್, ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್.ನಂದಕುಮಾರ್, ಪಾಲಿಕೆ ಸದಸ್ಯರಾದ ಪುಷ್ಪಲತಾ ಚಿಕ್ಕಣ್ಣ, ಪುರುಷೋತ್ತಮ್, ಕೆ.ಸಿ.ಶೌಕತ್ ಪಾಷ, ಜೆ.ಎಸ್.ಜಗದೀಶ್, ಎಂ.ಸುನೀಲ್, ಎನ್.ಸುನಿಲ್ ಕುಮಾರ್, ಉಮಾಮಣಿ, ಭಾಗ್ಯವತಿ, ರಮೇಶ್, ತಸ್ಲೀಮ್, ಜಿಲ್ಲಾ ಪಂಚಾಯಿತಿ ಸದಸ್ಯೆ ಡಾ.ಬಿ.ಪುಷ್ಪಾ ಅಮರನಾಥ್, ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳ ಮಾನಸ, ಮುಡಾ ಸದಸ್ಯ ಶಿವಮಲ್ಲು, ಮಾಜಿ ಸದಸ್ಯ ಭಾಸ್ಕರ ಎಲ್.ಗೌಡ, ಹಿನಕಲ್ ಪ್ರಕಾಶ್, ಕೆಪಿಸಿಸಿ ಸದಸ್ಯೆ ಬಿ.ಎಂ.ವೀಣಾ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಕಾರ್ಯದರ್ಶಿ ಎಂ.ರವಿಕುಮಾರ್, ಡಿಸಿಸಿ ಪ್ರಧಾನ ಕಾರ್ಯದರ್ಶಿ ಡೈರಿ ವೆಂಕಟೇಶ್, ಕಾಂಗ್ರೆಸ್ ನಗರ ಘಟಕ ಹಿಂದುಳಿದ ವರ್ಗಗಳ ವಿಭಾಗದ ಕಾರ್ಯದರ್ಶಿ ಧನಪಾಲ್ ಕುರುಬಾರಹಳ್ಳಿ, ವಕೀಲ ತ್ಯಾಗರಾಜ್, ಎನ್.ಎಸ್.ಗೋಪಿನಾಥ್, ಸುಶೀಲಾ ನಂಜಪ್ಪ ಮತ್ತಿತರರಿದ್ದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು ಮಾತನಾಡಿದರು.

ಕ್ಯಾಂಟೀನ್ ವೇಳಾಪಟ್ಟಿ

ಬೆಳಿಗ್ಗೆ ಉಪಾಹಾರ:
೭.೩೦ರಿಂದ ೧೦
ಮಧ್ಯಾಹ್ನದ ಊಟ:
೧ರಿಂದ ೩.೩೦
ರಾತ್ರಿ ಊಟ:
೭.೩೦ರಿಂದ ೯.೩೦

ರಿಯಾಯಿತಿ ಎಷ್ಟು?

ಒಂದು ಹೊತ್ತಿನ ಉಪಾಹಾರ, ಊಟಕ್ಕೆ ಕ್ರಮವಾಗಿ ೧೬.೧೬ ರೂ. ಹಾಗೂ ೨೧.೯೨ ರೂ. ಸೇರಿ ಒಟ್ಟು ೬೦ ರೂ.ಗಳನ್ನು ಸರ್ಕಾರ ನಿಗದಿಪಡಿಸಿದೆ. ಉಪಾಹಾರಕ್ಕೆ ೫ ರೂ., ೨ ಊಟಕ್ಕೆ ೨೦ ರೂ.ನಂತೆ ಗ್ರಾಹಕರಿಂದ ಒಟ್ಟು ೨೫ ರೂ. ಪಡೆಯಲಾಗುತ್ತದೆ. ಉಳಿದಿದ್ದನ್ನು ಸರ್ಕಾರ ಭರಿಸುತ್ತದೆ.

ಇಂದಿರಾ ಕ್ಯಾಂಟೀನ್‌ಗೆ ಪಾಲಿಕೆಯೂ ಸಹಕಾರ ನೀಡಿದೆ. ಕ್ಯಾಂಟೀನ್ ಸುತ್ತ ಗ್ರಿಲ್ ಅಳವಡಿಕೆಗೆ ಪಾಲಿಕೆಯಿಂದ ೨.೨ ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಕ್ಯಾಂಟೀನ್‌ಗಳಲ್ಲಿ ಸ್ವಚ್ಛತೆ ಕಾಪಾಡುವುದಕ್ಕೂ ಪಾಲಿಕೆ ಆದ್ಯತೆ ನೀಡಲಿದೆ.

–ಎಂ.ಜೆ.ರವಿಕುಮಾರ್

ಕಾರ್ಮಿಕರು, ಶ್ರಮಿಕರು ನಗರ ಮಧ್ಯಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುವುದರಿಂದ ಅಂತಹ ಜಾಗಗಳಲ್ಲಿ ಇಂದಿರಾ ಕ್ಯಾಂಟೀನ್ ಸ್ಥಾಪನೆಗೆ ಆದ್ಯತೆ ನೀಡಲಾಗಿದೆ. ನಗರದಲ್ಲಿ ೧೭ರಿಂದ ೧೯ ಬಡಾವಣೆಗಳಲ್ಲಿ ಬಡವರು, ಕಾರ್ಮಿಕರಿದ್ದಾರೆ. ಮುಂದಿನ ೬ ತಿಂಗಳಲ್ಲಿ ಆ ಬಡಾವಣೆಗಳಲ್ಲೂ ಕ್ಯಾಂಟೀನ್ ಆರಂಭಿಸಲಾಗುವುದು. ಪಾಲಿಕೆಯ ೬೫ ವಾರ್ಡ್‌ಗಳಲ್ಲಿ ಕನಿಷ್ಠ ೩೦ ವಾರ್ಡ್‌ಗಳಲ್ಲಿ ಇಂದಿರಾ ಕ್ಯಾಂಟೀನ್ ಸ್ಥಾಪಿಸುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಬೇಕು.

–ವಾಸು

ಆರ್ಥಿಕ ದುರ್ಬಲರನ್ನು ಸಬಲಗೊಳಿಸುವ ಮಹತ್ವಾಕಾಂಕ್ಷೆಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಇಂದಿರಾ ಕ್ಯಾಂಟೀನ್ ಯೋಜನೆ ಜಾರಿಗೆ ತಂದಿದ್ದಾರೆ. ಈ ಯೋಜನೆಗಾಗಿ ಒಟ್ಟು ೨೨೫ ಕೋಟಿ ರೂ. ವೆಚ್ಚವಾಗಿದೆ. ಕ್ಯಾಂಟೀನ್ ನಿರ್ವಹಣೆಗಾಗಿ ೧೦೦ ಕೋಟಿ ರೂ. ಮೀಸಲಿಡಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಂದು ಅಭಿವೃದ್ಧಿಗಾಗಿ ಖರ್ಚು ಮಾಡಿದ್ದಕ್ಕಿಂತ ಹೆಚ್ಚಾಗಿ ಸಿದ್ದರಾಮಯ್ಯ ಅವರು ಮೈಸೂರಿನ ಪ್ರಗತಿಗೆ ಹಣ ಬಿಡುಗಡೆ ಮಾಡಿದ್ದಾರೆ. ಸರ್ಕಾರ ನಾಡಿನ ಸರ್ವೋದಯಕ್ಕೆ ಶ್ರಮಿಸುತ್ತಿದ್ದರೆ, ವಿರೋಧಪಕ್ಷಗಳು ಜಾತಿ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿವೆ.

–ಎಂ.ಕೆ.ಸೋಮಶೇಖರ್

ನನಗೆ ಇಂದು ಬೆಳಿಗ್ಗೆ ತಿಂಡಿಗೆ ಖಾರಾಬಾತ್ ಸಿಕ್ಕಿತು. ತುಂಬಾ ರುಚಿಯಾಗಿತ್ತು, ಶುಚಿಯಾಗೂ ಇತ್ತು. ಯಾವುದೇ ಕಾರಣಕ್ಕೂ ಇಂದಿರಾ ಕ್ಯಾಂಟೀನ್ ಸ್ಥಗಿತಗೊಳಿಸದೆ ಮುಂದುವರೆಸಬೇಕು. ರಾಜ್ಯ ಸರ್ಕಾರದ ಈ ಕಾರ್ಯದಿಂದ ಶ್ರಮಿಕರಿಗೆ, ಬಡವರಿಗೆ, ಕೂಲಿ, ಕಾರ್ಮಿಕರಿಗೆ ಹೆಚ್ಚು ಅನುಕೂಲವಾಗಲಿದೆ.

–ಟಿ.ಪಿ.ಮಹೇಶಮೂರ್ತಿ

ಉಪಾಹಾರ ಪ್ರಮಾಣ, ಗುಣಮಟ್ಟ ಉತ್ತಮವಾಗಿದೆ. ಕಡಿಮೆ ಬೆಲೆಗೆ ಇಷ್ಟು ರುಚಿಕಟ್ಟಾದ ತಿಂಡಿ ಸಿಗುವುದಿಲ್ಲ. ಮನುಷ್ಯರ ಬದುಕಿಗೆ ಅಗತ್ಯವಾದ ಆಹಾರವನ್ನು ಅತ್ಯಲ್ಪ ದರಕ್ಕೆ ನೀಡಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯ ಶ್ಲಾಘನೀಯ.

–ಕೆ.ಪಿ.ಚಿಕ್ಕಸ್ವಾಮಿ
ಕಾಡನಹಳ್ಳಿ, ಮೈಸೂರು ತಾ.

ಅರ್ಧ ಗಂಟೆಗೇ ಖಾಲಿ

ಕಾಡಾ ಕಚೇರಿ ಆವರಣದಲ್ಲಿ ಶುಕ್ರವಾರ ಆರಂಭಗೊಂಡ ಇಂದಿರಾ ಕ್ಯಾಂಟೀನ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಾಹಾರ ಸೇವಿಸಿದರು. ಹಿಂದಿರುಗಿದ ಬಳಿಕ ಸಾರ್ವಜನಿಕರಿಗೆ ಉಚಿತವಾಗಿ ತಿಂಡಿ ಹಂಚಿಕೆ ಮಾಡಲಾಯಿತು. ಕೇವಲ ಅರ್ಧಗಂಟೆಯಲ್ಲೇ ಕೇಸರಿಬಾತ್, ಖಾರಾಬಾತ್ ಖಾಲಿಯಾಯಿತು.

ಮೊದಲನೆಯ ಪುಟದಿಂದ

ಎಚ್‌ಸಿಎಂ ಬೆಂಬಲಿಗರ ಅಸಮಾಧಾನ

ಆ ಸಂದರ್ಭ ದಲ್ಲಿ ಸಚಿವ ಮಹಾ ದೇವಪ್ಪ ಅವರು ನಂಜನಗೂಡು ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ರೂ.ಗೂ ಹೆಚ್ಚು ಹಣವನ್ನು ಮುಖ್ಯಮಂತ್ರಿ ಗಳ ಮನವೊಲಿಸಿ ತಂದಿ ದ್ದರು. ಈ ಅಭಿವೃದ್ಧಿ ಕೆಲಸ ಗಳಿಂದಲೇ ಕಳೆದ ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಕೇಶವಮೂರ್ತಿ ೨೧ ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದು, ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಪ್ರಸಾದ್ ಅವರನ್ನು ಸೋಲಿಸಲು ಸಾಧ್ಯವಾಯಿತು ಎಂಬುದು ಗುಂಪಿನ ವಾದ.

ವೀರಶೈವ ಮುಖಂಡರಾದ ಕುರಿಹುಂಡಿ ಮಹೇಶ್, ದೇವನೂರು ಮಹದೇವಪ್ಪ, ಮಲ್ಕುಂಡಿ ಬಸವರಾಜು, ವಲಗೆರೆ ಶಿವಮಲ್ಲು, ತರಗನಹಳ್ಳಿ ಎಂ.ನಂಜುಂಡಸ್ವಾಮಿ, ಹಲ್ಲರೆ ಮಹೇಶ, ಪುರಸಭಾ ಮಾಜಿ ಉಪಾಧ್ಯಕ್ಷ ಎನ್.ಇಂದ್ರ, ಜಿಪಂ ಮಾಜಿ ಸದಸ್ಯರಾದ ಶಶಿರೇಖಾ, ಕೆ.ಬಿ.ಸ್ವಾಮಿ ಸಭೆಯಲ್ಲಿ ಮಾತನಾಡಿದರು.

ಶಾಸಕ ಕಳಲೆ ಕೇಶವಮೂರ್ತಿ ನಿಷ್ಠಾವಂತ ಕಾಂಗ್ರೆಸ್ ಮುಖಂಡರನ್ನು ದೂರವಿಟ್ಟು ಜಾ.ದಳದವರಿಗೆ ಹಾಗೂ ವಲಸೆ ಬಂದವರಿಗೆ ಮಣೆ ಹಾಕುತ್ತಿದ್ದಾರೆ. ಸಚಿವರ ಬೆಂಬಲಿಗರನ್ನೂ ನಿರ್ಲಕ್ಷಿಸುತ್ತಿದ್ದಾರೆ. ತಮಗೆ ಬೇಕಾದವರಿಗೆ, ಹಿಂಬಾಲಕರಿಗೆ ಮಾತ್ರ ಮಣೆ ಹಾಕುತ್ತಿದ್ದಾರೆ. ಇದರಿಂದ ನಮಗೆಲ್ಲ ಸಾಕಷ್ಟು ನೋವಾಗಿದೆ ಎಂದು ಮುಖಂಡರು ಅಳಲು ತೋಡಿಕೊಂಡರು.

ಆಡಳಿತ ಪಕ್ಷಕ್ಕೆ ಪಟ್ಟಣದಲ್ಲಿ ಒಂದು ಕಚೇರಿಯನ್ನೂ ಮಾಡದೆ, ಸರ್ಕಾರದ ಸೌಲಭ್ಯ ಮತ್ತು ಪಕ್ಷದ ಯಾವುದೇ ಅನುದಾನವನ್ನು ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ತಲುಪಿಸಲು ಪ್ರಯತ್ನಿಸುತ್ತಿಲ್ಲ. ೯ ತಿಂಗಳಲ್ಲೇ ಶಾಸಕರು ತಮ್ಮ ನಿಜಬಣ್ಣ ಬಯಲು ಮಾಡಿದ್ದಾರೆ ಎಂದು ಕಿಡಿಕಾರಿದರು.

ಕ್ಷೇತ್ರದಲ್ಲಿನ ಕಾಂಗ್ರೆಸ್ ಕಾರ್ಯಕರ್ತರನ್ನು ಒಟ್ಟಿಗೆ ಕರೆದುಕೊಂಡು ಹೋಗುವ ಶಕ್ತಿ ಕಳಲೆ ಕೇಶವಮೂರ್ತಿ ಅವರಿಗೆ ಇಲ್ಲ. ಇಷ್ಟರಲ್ಲೇ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಭೆ ನಡೆಸಿ ಮುಂದಿನ ನಡೆ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖಂಡರುಗಳು ಹೇಳಿದರು.

ಇಂದನ್ ಬಾಬು, ಹಲ್ಲರೆ ಮಹೇಶ್, ಹರದನಹಳ್ಳಿ ಸೋಮೇಶ್, ಮಹದೇವಪ್ಪ, ಶಟ್ಟಹಳ್ಳಿ ಶಿವರಾಜು, ಚೆನ್ನಬಸಪ್ಪ, ವಳಗೆರೆ ಶಿವುಮಲ್ಲಪ್ಪ, ಸೂರಳ್ಳಿ ಕೆಂಪಣ್ಣ, ಹಗಿನವಾಳು ಸುರೇಶ್, ಚೆನ್ನನಾಯಕ, ಮಹದೇವಸ್ವಾಮಿ ಕುರಿಹುಂಡಿ, ಅಲಯ್ಯನಪುರ ರಾಜಣ್ಣ, ರಮೇಶ್, ಏಚ್‌ಗುಂಡ್ಲ ಸಿದ್ದಪ್ಪ, ಕಾಟೂರು ಶಿವರುದ್ರ, ಗುರುಸಿದ್ದಪ್ಪ, ಸಿದ್ದೇಗೌಡನಹುಂಡಿ ಗುರುಸ್ವಾಮಿ, ಲಕ್ಷಣಾಪುರ ಚೆನ್ನಸ್ವಾಮಪ್ಪ, ಕಡಬೂರು ಸಕಲೇಶ್, ಹಲ್ಲರೆ ಚೆನ್ನನಾಯಕ, ಹೆಜ್ಜಿಗೆ ಕೃಷ್ಣ, ಗಿರೀಶ್ ರವಿ, ತಾಲ್ಲೂಕು ಅಧ್ಯಕ್ಷೆ ಸೌಭಾಗ್ಯ, ಆಕಲ ಮಹೇಶ್, ಐಟಿ ಮಂಜು, ಜಿ.ಪಂ ಮಾಜಿ ಸದಸ್ಯ ಚೋಳರಾಜು, ಇಬ್ಜಾಲ ಬೈರ ನಾಯಕ, ಚಿನ್ನಸ್ವಾಮಿ, ನೇರಳೆ ರಾಮಲಿಂಗೇಗೌಡ, ಕಣೇನೂರು ಪ್ರಭುಸ್ವಾಮಿ, ರವಿ, ಸೂರ್ಯಕುಮಾರ್, ಸೋಮೇಶ್ ಮತ್ತಿತರರು ಸಭೆಯಲ್ಲಿದ್ದರು.

ಸಚಿವ ಡಾ.ಎಚ್.ಸಿ.ಮಹದೇವಪ್ಪ ಬೆಂಬಲಿಗ ಕಾಂಗ್ರೆಸ್ಸಿಗರ ಗುಂಪು ನಂಜನಗೂಡಿನ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಸಚಿವರ ಗೃಹ ಕಚೇರಿಯಲ್ಲಿ ಶುಕ್ರವಾರ ನಡೆಸಿದ ಸಭೆಯಲ್ಲಿ ಸ್ಥಳೀಯ ಮುಖಂಡರು ಮಾತನಾಡಿದರು.

೧೭ರಂದು ನಗರಸಭೆ ಸಾಮಾನ್ಯ ಸಭೆ

ಚಾಮರಾಜನಗರ,ಜ.೧೨– ಚಾಮರಾಜನಗರ ನಗರಸಭೆಯ ಸಾಮಾನ್ಯ ಸಭೆಯು ಜ.೧೭ರಂದು ಮಧ್ಯಾಹ್ನ ೩ ಗಂಟೆಗೆ ನಗರಸಭೆ ಕಚೇರಿ ಸಭಾಂಗಣದಲ್ಲಿ ನಗರಸಭಾ ಅಧ್ಯಕ್ಷರಾದ ಶೋಭಾ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳಪೆ ರಸ್ತೆ ಕಾಮಗಾರಿ: ಆರೋಪ

ಯಮಸಂಧಿ, ಐರವಳ್ಳಿ, ಕಡ್ಲೂರು ಗ್ರಾಮಸ್ಥರ ಪ್ರತಿಭಟನೆ

ಬೇಲೂರು,ಜ.೧೨– ಬೇಲೂರು ವಿಧಾನಸಭಾ ಕ್ಷೇತ್ರದ ಶಾಸಕ ವೈ.ಎನ್.ರುದ್ರೇಶಗೌಡರ ಸ್ವಗ್ರಾಮ ವ್ಯಾಪ್ತಿಯಲ್ಲಿ 'ಪ್ರಧಾನಮಂತ್ರಿ ಸಡಕ್ ಯೋಜನೆ'ಯಡಿ ನಡೆಯುತ್ತಿರುವ ಡಾಂಬರೀಕರಣ ತೀವ್ರ ಕಳಪೆಯಿಂದ ಕೂಡಿದೆ ಎಂದು ಆರೋಪಿಸಿ ಯಮಸಂಧಿ, ಐರವಳ್ಳಿ ಹಾಗೂ ಕಡ್ಲೂರು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮದ ಮುಖಂಡ ಎಂ.ಎ.ನಾಗರಾಜು, 'ಪ್ರಧಾನಮಂತ್ರಿ ಸಡಕ್ ಯೋಜನೆ' ಕೇಂದ್ರ ಸರ್ಕಾರದ ಮಹತ್ವಪೂರ್ಣ ಯೋಜನೆಯಾಗಿದೆ. ಈ ಯೋಜನೆಯಲ್ಲಿ ನಿರ್ಮಿಸಿದ ರಸ್ತೆಗಳಲ್ಲಿ ಐದು ವರ್ಷಗಳ ಕಾಲ ಗುಣಮಟ್ಟ ಕಾಪಾಡಬೇಕು. ಆದರೆ, ಐರವಳ್ಳಿ, ಯಮಸಂಧಿ ಗ್ರಾಮಗಳಿಗೆ ನಿರ್ಮಿಸುತ್ತಿರುವ ೨ ಕಿ.ಮೀ ಡಾಂಬರ್ ರಸ್ತೆ ಅತ್ಯಂತ ಕಳಪೆಯಿಂದ ಕೂಡಿದೆ ಎಂದು ದೂರಿದರು.

ಡಾಂಬರು ಹಾಕಿದ ಮರುಕ್ಷಣದಲ್ಲಿ ವಾಹನಗಳ ಟೈರಿಗೆ ಕಿತ್ತು ಹೋಗಿದೆ. ಬೇಲೂರಿನ ಶಾಸಕರೇ ಈ ರಸ್ತೆಗೆ ಶಂಕುಸ್ಥಾಪನೆ ಮಾಡಿದ್ದಾರೆ. ಸೌಜನ್ಯಕ್ಕೂ ತಮ್ಮದೇ ಗ್ರಾಮದ ರಸ್ತೆಯ ಬಗ್ಗೆ ಆಸಕ್ತಿ ಇಲ್ಲವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಬೇಕು. ಇಲ್ಲವಾದರೆ ಕಾಮಗಾರಿ ಮುಂದುವರಿಸಲು ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ವಾಗಿನಕೆರೆ ಗ್ರಾಮದ ಸುಪ್ರೀತ್, ದೇವೇಗೌಡ, ಪೂರ್ಣೇಶ್, ಲೋಕಪ್ಪಗೌಡ, ಮಹೇಶ್, ಮೊಗಣ್ಣಗೌಡ, ಮಂಜು, ದೀಪು, ಕೃಷ್ಣೇಗೌಡ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೇಲೂರು ತಾಲ್ಲೂಕಿನ ಐರವಳ್ಳಿ, ಯಮಸಂಧಿ ಗ್ರಾಮಗಳಲ್ಲಿ ನಿರ್ಮಿಸುತ್ತಿರುವ ಡಾಂಬರು ರಸ್ತೆ ಕಳಪೆಯಿಂದ ಕೂಡಿದೆ ಎಂದು ಆರೋಪಿಸಿ ಗ್ರಾಮಸ್ಥರು ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸಿದರು.

೧೯ರಂದು ತಾಲ್ಲೂಕು ಯುವಜನ ಮೇಳ

ಚಾಮರಾಜನಗರ,ಜ.೧೨– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನ ತಾಲ್ಲೂಕು ಮಟ್ಟದ ಯುವಜನ ಮೇಳವನ್ನು ಜ.೧೯ರಂದು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಏರ್ಪಡಿಸಲಾಗಿದ್ದು, ಬೆಳಿಗ್ಗೆ ೯ ಗಂಟೆಗೆ ತಾಲ್ಲೂಕಿನ ವ್ಯವಸ್ಥಾಪಕರಲ್ಲಿ ವರದಿ ಮಾಡಿಕೊಳ್ಳುವಂತೆ ತಿಳಿಸಿದೆ.

ವೈಯಕ್ತಿಕವಾಗಿ ಭಾವಗೀತೆ, ಲಾವಣಿ, ರಂಗಗೀತೆ ಹಾಗೂ ಏಕಪಾತ್ರಾಭಿನಯ ಸ್ಪರ್ಧೆಗಳಿವೆ. ಗುಂಪು ಸ್ಪರ್ಧೆಗಳಾಗಿ ಗೀಗೀ ಪದ (೫ ಮಂದಿ), ಕೋಲಾಟ ಹಾಗೂ ಜಾನಪದ ನೃತ್ಯ (೧೨ ಮಂದಿ), ಸೋಬಾನೆ ಪದ (೪ ಮಂದಿ), ಭಜನೆ (೮ ಮಂದಿ), ಜಾನಪದ ಗೀತೆ ಹಾಗೂ ಚರ್ಮವಾದ್ಯ ಮೇಳ (೬ ಮಂದಿ) ಸ್ಪರ್ಧೆಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ.೦೮೨೨೬-೨೨೪೯೩೨, ೯೪೮೨೭೧೮೨೭೮, ೯೮೮೦೨೧೧೦೨೭ನ್ನು ಸಂಪರ್ಕಿಸುವಂತೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಉಗ್ರಗಾಮಿಗಳೆಂದು ಕರೆದಿರುವ ಸಿಎಂ ಹೇಳಿಕೆಗೆ ಬಿಜೆಪಿ ಖಂಡನೆ

ಕಾಂಗ್ರೆಸ್ ಕಚೇರಿ ಮುಂದೆ ಪ್ರತಿಭಟನೆಗೆ ಯತ್ನ

ಬಿಜೆಪಿಯವರನ್ನು ಭಯೋತ್ಪಾದಕರೆಂದು ಕರೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೇಷರತ್ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿ ಪಕ್ಷದ ಕಾರ್ಯಕರ್ತರು ಜಿಲ್ಲಾ ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ,ಜ.೧೨– ಬಿಜೆಪಿ ಮತ್ತು ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಉಗ್ರಗಾಮಿಗಳೆಂದು ಕರೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೇಷರತ್ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸಲು ಹೊರಟಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಶುಕ್ರವಾರ ನಗರದಲ್ಲಿ ಬಂಧಿಸಿ ಬಿಡುಗಡೆ ಮಾಡಿದರು.

ಬಿಜೆಪಿ ಕಚೇರಿಯಿಂದ ಮೆರವಣಿಗೆಯಲ್ಲಿ ಕಾಂಗ್ರೆಸ್ ಕಚೇರಿಗೆ ಹೊರಟಿದ್ದ ಪ್ರತಿಭಟನಾಕಾರರನ್ನು ಪ್ರವಾಸಿ ಮಂದಿರದ ಸಮೀಪ ಪೊಲೀಸರು ತಡೆದಾಗ ಅಲ್ಲಿಯೇ (ರಾಷ್ಟ್ರೀಯ ಹೆದ್ದಾರಿ ೨೦೯) ಕುಳಿತು ಘೋಷಣೆ ಕೂಗುತ್ತಾ ರಸ್ತೆತಡೆ ನಡೆಸಿದರು. ಇದರಿಂದ ಸಂಚಾರಕ್ಕೆ ಅಡಚಣೆಯಾಗಲಾಗಿ ಪೊಲೀಸರು ೨೦ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಿ ಕರೆದೊಯ್ದರು. ನಂತರ ಬಿಡುಗಡೆ ಮಾಡಿದರು.

ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಜಿ.ಎಂ.ಗಾಡ್ಕರ್, ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಕುಲಗಾಣ ಶಾಂತಮೂರ್ತಿ, ಚುಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯ, ನಗರಸಭೆ ಮಾಜಿ ಸದಸ್ಯ ಸುಂದರರಾಜು, ನಾಗವಳ್ಳಿ ಶಿವರುದ್ರ, ನಿಜಗುಣರಾಜು, ಮಂಗಳಮ್ಮ, ದಾಕ್ಷಾಯಿಣಿ, ಉಷಾರಾಣಿ, ಕವಿತಾ ಮೊದಲಾದವರು ಬಂಧನಕ್ಕೆ ಒಳಗಾಗಿದ್ದರು.

ತಾಪಂ ಉಪಾಧ್ಯಕ್ಷ ಪಿ.ಎನ್.ದಯಾನಿಧಿ, ಸದಸ್ಯರಾದ ಬಸವಣ್ಣ, ರತ್ನಮ್ಮ ನಂಜಪ್ಪ, ವಿಶಾಲಾಕ್ಷಿ, ಬಿಜೆಪಿ ಮಾಧ್ಯಮ ಸಹಪ್ರಮುಖ್ ಮಂಜುನಾಥ್, ಆರ್.ಪುರುಷೋತ್ತಮ್, ದೊರೆಸ್ವಾಮಿ, ಚಂದ್ರಶೇಖರರಾವ್, ಎಸ್.ರಾಘವೇಂದ್ರ, ಮರಿಯಾಲ ಮಹೇಶ್, ಡಿ.ಎಂ.ಪರಶಿವಮೂರ್ತಿ, ಕೊತ್ತಲವಾಡಿ ಲೋಕೇಶ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.